ಛೇರ್ಮನ್: ಈಗ ಸಂಬಂಧಪಟ್ಟಂತ ಸಚಿವರು ಇಲ್ಲದೆ ಇರುವುದರಿಂದ, ಆಲ್ಲಿ ಆಗುವವರಿಗೆ ತಾವು ಏನು ವಿವರಣೆ ಕೊಟ್ಟಿದ್ದಾರೆ, ಅದಕ್ಕೆ ತಮ್ಮ ನಿಯಂತ್ರಣದಲ್ಲಿರುವವರ ಮೇಲೆ ಅವರು ಕ್ರಮ ತೆಗೆದುಕೊಳ್ಳುತ್ತಾರೆ.

(ಗೊಂದಲ)

SRI P.G.R.SINDHIA: Definitely Government will not hesitate in taking action against them.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: Nobody knows it. ತಮಗೆ ಸಮಸ್ಯೆ ಗೊತ್ತಿಲ್ಲ ಅಂದರೆ ಹೇಗೆ?

(ಗೊಂದಲ)

SRI P.G.R.SINDHIA: From the available machinery we will find out.

ಶ್ರೀ ವಾಟಾಳ್ ನಾಗರಾಜ್: ಒಂದು ದಿನದಿಂದ ಇದೇ ನಡೆಯುತ್ತಿದೆ, ಇದು ಒಂದು ದಂಧೆಯಾಗುತ್ತಿದೆ. ಅದನ್ನು ತಾವು ಪರಿಶೀಲಿಸಬೇಕು ಈ ವಸೂಲಿ ನಿನ್ನೆ ಬೆಳಗಿನಿಂದ ಪ್ರಾರಂಭವಾಗಿದೆ.

ಛೇರ್ಮನ್: ದಯಮಾಡಿ ಕ್ರಮ ತೆಗೆದುಕೊಳ್ಳಿ, ನಿಯಮ 69ರ ಪ್ರಕಾರ ಸ್ವಲ್ಪ ಸಣ್ಣ ಕನಫ್ಯೂಶನ್ ಇತ್ತು ಮುಂದೆ ಹಾಕಿದ್ದೇನೆ ಎಂದು ಹೇಳಿದ್ದೆ, ಈಗ ಅವರು ಇಚ್ಛಿಪಟ್ಟರೆ ತೆಗೆದುಕೊಳ್ಳಬಹುದು, ಆದಷ್ಟು ಬೇಗ ಮುಗಿಸಿಬಿಡಿ.

(ಇ) ದಕ್ಷಿಣ ಕನ್ನಡ ಜಿಲ್ಲೆಯ ಬೃಹತ್ ಕೈಗಾರಿಕೆಯ ಸ್ಥಾಪನೆಯಿಂದ ಉಂಟಾಗತಕ್ಕ ಅನಾಹುತಗಳ ಕುರಿತು.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಛೇರ್ಮನ್‌ರೆ, ಈ ಅಧಿವೇಶನದ ಉದ್ದಕ್ಕೂ ನಾನು ಹಾಗೂ ದಕ್ಷಿಣಕನ್ನಡ ಜಿಲ್ಲೆಯ ಸಹ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಯ ಸ್ಥಾಪನೆಯಿಂದ ಉಂಟಾಗತಕ್ಕ ಅನಾಹುತಗಳ ಬಗ್ಗೆ ಮೀನುಗಾರಿಕೆ ಸಚಿವರು, ಬೃಹತ್ ಉದ್ದಿಮೆ ಸಚಿವರಲ್ಲಿ ನಾನು ಪ್ರಸ್ತಾವನೆಯನ್ನು ಕೇಳಬಯಸುತ್ತೇನೆ. ನಿಯಮ 69ರ ಪ್ರಕಾರ ಇದು ಒಂದು ಬಹಳ ಮಹತ್ವದ ವಿಷಯದ ಬಗ್ಗೆ ಚರ್ಚೆ ಮಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಸ್ಥಾಪಿಸಲ್ಪಟ್ಟಿರುವ ಕುದುರೆಮುಖ ಪ್ಯಾಲಟೈಸೇಷನ್ ಪ್ಲಾಂಟ್, ಎಂ.ಸಿ.ಎಫ್, ಎಂ.ಆರ್.ಪಿ.ಎಲ್. ಈ ಮೊದಲಾದ ಬೃಹತ್ ಕೈಗಾರಿಕೆಗಳಿಂದಾಗಿ ಆಗುವ ಅನಾಹುತಗಳನ್ನು ಬಹಳ ಗಂಭೀರವಾಗಿ ನಾವೆಲ್ಲಾ ಪರಿಗಣಿಸಬೇಕಾಗಿದೆ. ಇದರಲ್ಲಿ

ಮುಖ್ಯವಾಗಿ ಯಾವರೀತಿ ಸುಮಾರು ನಾಲ್ಕು ಲಕ್ಷ ಮೀನುಗಾರರಿಗೆ ಉಂಟಾಗುವ ತೊಂದರೆಗಳು, ಜೊತೆಗೆ ಮೀನನ್ನು ತಿನ್ನುವವರಿಗೆ ಕೂಡ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಹೇಳಿಕೆಯನ್ನು ಮಾಡುವುದಕ್ಕೆ ಬೃಹತ್ ಕೈಗಾರಿಕೆ ಸಚಿವರು ಇಲ್ಲ, ನಾವು ಮತ್ತು ಪರಿಸರ ಸಚಿವರು ಇಬ್ಬರು ಇದ್ದೇವೆ. ಏಕೆಂದರೆ ಮಾನ್ಯ ಸದಸ್ಯರು ಬೃಹತ್ ಸಚಿವರಿಗೆ ಸಂಬಂಧಪಟ್ಟಿದ್ದನ್ನು ಹೇಳುತ್ತಿರುವುದರಿಂದ ಸಚಿವರಿಲ್ಲದ ಕಾರಣ ಇದನ್ನು ಸೋಮವಾರಕ್ಕೆ ತೆಗೆದುಕೊಂಡು ಬಿಟ್ಟರೆ ನಾವು ಮೂರು ಜನ ಸೇರಿ ಇದಕ್ಕೆ ಒಂದು ಉತ್ತರವನ್ನು ಕೊಡುತ್ತೇವೆ.

ಶ್ರೀ ಯು.ಆರ್.ಸಭಾಪತಿ: ಛೇರ್ಮನ್‌ರೆ, ನನಗೆ ಸೋಮವಾರಕ್ಕೆ ಅನುಮತಿ ಕೊಡುವುದಾದರೆ ನಾನು ಸೋಮವಾರವೇ ಈ ವಿಷಯವನ್ನು ಪ್ರಸ್ತಾಪ ಮಾಡಬಯಸುತ್ತೇನೆ.

ಛೇರ್ಮನ್: ಉತ್ತರ ತಾವು ಏನಾದರೂ ಇವತ್ತು ಕೊಡುತ್ತೀರಾ? ಉತ್ತರ ಇವತ್ತು ಕೊಡುವುದಿಲ್ಲ ಅಂದರೆ ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಎಂ.ಸಿ.ನಾಣಯ್ಯ: ಛೇರ್ಮನ್‌ರೆ, ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರ ಮೀನುಗಾರಿಕೆ, ಪರಿಸರ, ಹಾಗೂ ಬೃಹತ್ ಕೈಗಾರಿಕೆಗೆ ಸಂಬಂಧಪಟ್ಟಿದ್ದು ಇದೆ. ಬೃಹತ್ ಕೈಗಾರಿಕೆ ಸಂಬಂಧಪಟ್ಟಹಾಗೆ ಮಾನ್ಯ ದೇಶಪಾಂಡೆಯವರು ಉತ್ತರ ಹೇಳಬೇಕಾಗುತ್ತದೆ, ಪರಿಸರಕ್ಕೆ ಸಂಬಂಧಪಟ್ಟಹಾಗೆ ಮಾನ್ಯ ಶಿವಣ್ಣನವರು ಉತ್ತರ ಹೇಳಬೇಕಾಗುತ್ತದೆ, ಹಾಗೂ ಮೀನುಗಾರಿಕೆಗೆ ಸಂಬಂಧಪಟ್ಟಹಾಗೆ ಮಾನ್ಯ ಜಯಪ್ರಕಾಶ್ ಹೆಗಡೆಯವರು ಉತ್ತರ ನೀಡಬೇಕಾಗುತ್ತದೆ. ಈ ಮೂರು ಜನ ಸೇರಿ ಒಟ್ಟಾರೆಯಾಗಿ ಇದಕ್ಕೆ ಒಂದು ಉತ್ತರ ಕೊಡಬೇಕಾಗುತ್ತದೆ. ಇದಕ್ಕೆ ನಾವು ಅನುಕೂಲ ಮಾಡಿಕೊಡುತ್ತೇವೆ, ತಾವು ಹೇಳುವ ಆಗಿದ್ದರೆ ಹೇಳಿ, ನಾವು ಸೋಮವಾರಕ್ಕೆ ಮಂಗಳವಾರಕ್ಕೆ ಇದಕ್ಕೆ ಉತ್ತರವನ್ನು ರೆಡಿ ಮಾಡಿ ಕೊಡುತ್ತೇವೆ. ಸಂಪೂರ್ಣವಾದ ಉತ್ತರವನ್ನು ಕೊಡುತ್ತೇವೆ. ಅಧ್ಯಕ್ಷರೇ, ನೀವು ಬೇಕಾದರೆ ಮಂಗಳವಾರ ತೆಗೆದುಕೊಳ್ಳಿ, ನಾವು ಆ ಸಂದರ್ಭದಲ್ಲಿ ಉತ್ತರವನ್ನು ರೆಡಿ ಮಾಡಿ, ಸದನದಲ್ಲಿ ಮಂಡಿಸುತ್ತೇವೆ.

ಛೇರ್ಮನ್: ಆ ದಿನದ ವಿಷಯ ಪಟ್ಟಿ ಹಾಗೂ ಅಜೆಂಡ ನೋಡಿಕೊಂಡು ಸೋಮವಾರ ಅಥವಾ ಮಂಗಳವಾರ ಮಾಡಬಹುದು.

ಶ್ರೀ ಎಂ.ಸಿ.ನಾಣಯ್ಯ: ನಮಗೆ ಈಗ ಅವರು ಕೊಟ್ಟಿರುವ ವಿಷಯಕ್ಕೆ ಸರ್ಕಾರದ ಪರವಿಯಿಂದ ಸೋಮವಾರ ಉತ್ತರವನ್ನು ರೆಡಿ ಮಾಡುತ್ತೇವೆ. ಏಕೆಂದರೆ ಬಹಳ ಸಲ ಈ ವಿಚಾರ ಚರ್ಚೆಗೆ ಬಂದಿದೆ. ಆದ್ದರಿಂದ ಈ ವಿಷಯವನ್ನು ಮಾನ್ಯ ಸದಸ್ಯರು ಸೋಮವಾರ ಅಥವಾ ಮಂಗಳವಾರ ಪ್ರಸ್ತಾಪ ಮಾಡಲಿ.

ಛೇರ್ಮನ್: ಮಂಗಳವಾರ ತೆಗೆದುಕೊಳ್ಳೋಣ It will be taken up.

ಶ್ರೀ ಯು.ಆರ್.ಸಭಾಪತಿ: ಬಹಳ ಗಹನವಾದ ಚರ್ಚೆಯಾಗಿರುವುದರಿಂದ ಇದನ್ನು ಕೂಲಂಕಷವಾಗಿ ಚರ್ಚೆ ಮಾಡಬೇಕು ಎಂದು ನಿಯಮ 69ರ ಅಡಿಯಲ್ಲಿ ನನಗೆ ಅವಕಾಶ ಕೊಟ್ಟಿದ್ದಾರೆ, ನೀವು ಸೋಮವಾರಕ್ಕೆ ಉತ್ತರ ಕೊಡುತ್ತೀರಿ ಎನ್ನುವುದಾದರೆ ಸೋಮವಾರಕ್ಕೆ ನನಗೆ 69ರ ನಿಯಮಾವಳಿಯಲ್ಲಿ ಚರ್ಚೆ ಮಾಡಲು ಅವಕಾಶ ಕೊಡಬೇಕು.

MR. CHAIRMAN: There is no dispute. ತಮಗೆ option ಬಿಡುತ್ತೇನೆ. ಮಂತ್ರಿಗಳಿಂದ ಸಂಬಂಧಪಟ್ಟಹಾಗೆ ಎಲ್ಲ ಆಮೂಲಾಗ್ರವಾಗಿ ಉತ್ತರಗಳು ಬೇಕು ಎನ್ನುವುದಾದರೆ ಮಂಗಳವಾರ ಆಗುತ್ತದೆ.

ಶ್ರೀ ಯು.ಆರ್.ಸಭಾಪತಿ: ನನಗೆ ಮಂಗಳವಾರ ನಿಯಮ 69ರಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಛೇರ್ಮನ್: ಇದು ನಿಮಯ 69ರ ಕೆಳಗೆ ಹೇಗೆ ತೆಗೆದುಕೊಳ್ಳುತ್ತಾರೋ ಹಾಗೆ ಆಗುತ್ತದೆ. ಈಗಿರುವ ಪದ್ಧತಿ, ಪ್ರಕಾರ ತಮಗೆ ಅವಕಾಶ ಕೊಡುತ್ತೇವೆ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಸಭಾಧ್ಯಕ್ಷರು, ನಮಗೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಸಹ ಸದಸ್ಯರಿಗೂ ಕೂಡ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ನೀವು ನಮಗೆ ನಿಯಮ 69ರ ಅಡಿಯಲ್ಲಿ ಮಂಗಳವಾರ ಅವಕಾಶ ಕೊಡಿ.

ಛೇರ್ಮನ್: ಆಯಿತು ಬಿಡಿ, ನಿಯಮ 69ರ ಪ್ರಕಾರ ಕೆಳಗಡೆ ಆ ವಿಚಾರ ಇದ್ದೇ ಇರುತ್ತದೆ. ಇವತ್ತಿನ ಕಾರ್ಯಕಲಾಪಗಳು ಮುಕ್ತಾಯವಾದವು, ಸದನವು ಪುನಃ ಸೋಮವಾರ 11-00 ಗಂಟೆಗೆ ಮತ್ತೆ ಸಭೆ ಸೇರೋಣ.

(ಸದನವು ಸಂಜೆ: 6 ಗಂಟೆ 35 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 8ನೇ ಸೆಪ್ಟೆಂಬರ್ ಮಾಹೆ 1997ರ ಸೋಮವಾರದಂದು ಬೆಳಿಗ್ಗೆ 11-00 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)